
ಹಾಸನ
DIST. WORKING JOURNALIST ASSOCIATION (R.)


ಪತ್ರಕರ್ತರ ಭವನ
ಹಾಸನ


ಪತ್ರಕರ್ತರ ಭವನ
ಹಾಸನ

ಘಟನೆ
ಹಳ್ಳಿಯಲ್ಲಿ
ಹೊಂಗೆರೆ
ಎಂಬುವರ
ತ ಯುವಕ.
ತಾಲೂಕು
ಚಿಕ್ಕಮತಿ
ವರಾಜು
ಪ್ರಮೋದ
ಫೋನ್
ಕೇಳಲು
ಎಂದು
ಸಚಿನ್
ಎಳನೀರು
ತ್ತೇನೆಂದು
ಹೋಗಿ,
ಗ್ರಾಮದ
ಎಂಬುವರ



ಜಮೀನಿನಲ್ಲಿ ಸೋಮವಾರ ಮಧ್ಯಾಹ್ನ ಸುಮಾರು 2.45 ಗಂಟೆ ಸಮಯದಲ್ಲಿ ತೆಂಗಿನ ಮರಕ್ಕೆ ಹತ್ತಿ ಎಳನೀರು ಕೀಳುತ್ತಿದ್ದ.

ತೆಂಗಿನಮರದ ಸೋಗೆ ಮಟ್ಟೆಗೆ ಪಕ್ಕದಲ್ಲಿದ್ದ ವಿದ್ಯುತ್ ಲೈನ್ ತಗುಲಿದ್ದರಿಂದ ವಿದ್ಯುತ್ ಶಾಕ್ಗೆ ಒಳಗಾದ ಸಚಿನ್ ಮರದಿಂದ ಕೆಳಗಡೆ ಬಿದ್ದು ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ.

ಸಚಿನ್ ಸಾವಿಗೆ ಕಾರಣವಾದ ಪ್ರಮೋದ, ಅವ್ವೇರಹಳ್ಳಿ ಗ್ರಾಮದ ಮಂಜ, ನಿಂಗರಾಜು ಮತ್ತು ಧರ್ಮ ಇತರರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಮೃತನ ತಂದೆ ನುಗ್ಗೇಹಳ್ಳಿ ಪೊಲೀಸರಿಗೆ ದೂರು ನೀಡಿದ್ದಾರೆ.

ಭಾಗದಲ್ಲಿ ಒಕ್ಕಲಿಗ ಸಮಾಜದ ಮೇಲಿನ ಹಿಡಿತಕ್ಕಾಗಿ ಹೆಚ್.ಡಿ. ದೇವೇಗೌಡರ ಕುಟುಂಬ ಹಣಿಯುವ ಉದ್ದೇಶದಿಂದ ರೇವಣ್ಣ ಅವರನ್ನೂ ಆರೋಪಿ ಮಾಡಲಾಗಿದೆ ಎಂದು ಆರೋಪಿಸಿದರು. (ಪುಟ 4ಕ್ಕೆ)

ಚಿಕ್ಕಪ್ಪನಷ್ಟೇ ಅಲ್ಲ, ದೇಶದ ಸಾಮಾನ್ಯ ವ್ಯಕ್ತಿಯಾಗಿ ಈ ರೀತಿಯ ಕಾನೂನುಬಾಹಿರ ವಿಷಯಗಳ ವಿರುದ್ಧ ಹೋರಾಟ ಮಾಡುತ್ತೇನೆ. ಇದರ ಸಮಗ್ರ ತನಿಖೆಯನ್ನು ಸರ್ಕಾರವೇ ನಡೆಸಬೇಕು ಎಂದು ಆಗ್ರಹಿಸಿದರು.

ಏನು ಆಗಬೇಕೋ, ಅದು ಆಗುತ್ತದೆ. ಹಾಗೆಯೇ ಪ್ರಜ್ವಲ್ ರೇವಣ್ಣ ವಿದೇಶಕ್ಕೆ ಹೋಗುವಾಗ ಅವರ ಜತೆಗೆ ಇದ್ದವರು ಯಾರು? ಯಾರು ಯಾರಿಗೆ ಕರೆ ಮಾಡಿದ್ರು ಅನ್ನೋದನ್ನ ಅವರನ್ನೇ ಕೇಳಬೇಕು ಎಂದರು.

# ಪ್ರಜ್ವಲ್‌ಗೆ ಕಠಿಣ ಶಿಕ್ಷೆ ಆಗಬೇಕು: ಮಹಿಳಾ ವೈದ್ಯರ ಒಕ್ಕೊರಲ ಆಗ್ರಹ

**ಹಾಸನ, ಏ.30–** ಸಾವಿರಾರು ಹೆಣ್ಣು ಮಕ್ಕಳನ್ನು ದುರ್ಬಳಕೆ ಮಾಡಿಕೊಂಡಿರುವ ಸಂಸದ ಪ್ರಜ್ವಲ್‌ಗೆ ಕಠಿಣ ಶಿಕ್ಷೆಯಾಗಬೇಕು ಎಂದು ಶ್ರೀ ಆದಿಚುಂಚನಗಿರಿ ಒಕ್ಕಲಿಗ ಮಹಿಳಾ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷೆ ಹಾಗೂ ಖ್ಯಾತ ವೈದ್ಯ ಡಾ. ಭಾರತಿ ರಾಜಶೇಖರ್ ಆಗ್ರಹಿಸಿದರು.

ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಸದನ ನೀಚ ಕೃತ್ಯ ಮನೆ ಮನೆ ರಂಪಾಯಣ ಆಗಿದೆ. ಹೆಣ್ಣು ಮಕ್ಕಳ ಗುರುತು ಮರೆ ಮಾಚದೆ ಪೆನ್‌ಡ್ರೈವ್ ಮೂಲಕ ಅಶ್ಲೀಲ ದೃಶ್ಯಾವಳಿ ಹಂಚಿಕೆ ಮಾಡಿರುವುದು ಖಂಡನೀಯ ಎಂದರು.

ತಪ್ಪು ಮಾಡಿರುವವರು ಹಾಗೂ ಹಂಚಿಕೆ ಮಾಡಿರುವವರಿಗೆ ಕಠಿಣ ಶಿಕ್ಷೆ ಆಗಬೇಕು. ಹಾಗೆಯೇ ಜವಾಬ್ದಾರಿ ಸ್ಥಾನದಲ್ಲಿರುವ ಪ್ರಜ್ವಲ್ ರೇವಣ್ಣ, ತಾನೇ ವಿಡಿಯೋ ಮಾಡಿ ಅವುಗಳು ಎಲ್ಲೆಡೆ ಓಡಾಡಲು ಕಾರಣನಾಗಿರುವುದೂ ತಪ್ಪು ಎಂದರು.




ಈ ಬಗ್ಗೆ ಸಮಗ್ರ ತನಿಖೆ ಆಗಬೇಕು. ಮುಂದೆ ಯಾರೂ ಇಂಥ ಕೃತ್ಯ ಮಾಡದಂತೆ ಎಚ್ಚರಿಕೆಯ ಪಾಠ ಆಗಬೇಕು ಎಂದು ಒತ್ತಾಯಿಸಿದರು.

ಇನ್ನುಮುಂದೆ ಯಾರೂ ಇಂತಹ ನಾಚಿಗೇಡಿನ ಕೃತ್ಯದಲ್ಲಿ ಭಾಗಿಯಾಗಬಾರದು. ದೌರ್ಜನ್ಯಕ್ಕೆ ಒಳಗಾಗಿರುವ ಹೆಣ್ಣು ಮಕ್ಕಳು ಸಂಬಂಧಪಟ್ಟವರ ಬಳಿ ಎಲ್ಲವನ್ನೂ ಹೇಳಿ ನ್ಯಾಯ ಪಡೆಯಬೇಕು ಎಂದು ಮನವಿ ಮಾಡಿದರು.

ವಿಡಿಯೋ ಮಾಡಿರುವವರು ಮತ್ತು ಹಂಚಿಕೆ ಮಾಡಿರುವವರ ಮೇಲೂ ಕಠಿಣ ಕ್ರಮ ಜರುಗಿಸಿ ಎಂದು ಆಗ್ರಹಿಸಿದರು.

ಮತ್ತೊಬ್ಬ ವೈದ್ಯರಾದ ಡಾ. ಸಾವಿತ್ರಿ ಮಾತನಾಡಿ, ಯಾರೇ ಆಗಲಿ ಅಶ್ಲೀಲ ದೃಶ್ಯಾವಳಿ ನೋಡಿದಾಗ ವ್ಯಕ್ತಿಯ ವಿಕೃತ ಮನಸ್ಸು ಅರ್ಥ ಆಗಲಿದೆ, ಅದನ್ನು ನೋಡಲು ಹಿಂಸೆ ಆಗುತ್ತಿದೆ, ಇದನ್ನು ರಾಜಕೀಯ ದುರುದ್ದೇಶ ಮಾಡಿರಬಹುದು, ಆದರೂ ಅಕ್ರಮ ಎಸಗಿರುವವರಿಗೆ ಕಠಿಣ ಶಿಕ್ಷೆ ಆಗಬೇಕು ಎಂದು ಒತ್ತಾಯಿಸಿದರು. (ಪುಟ 4ಕ್ಕೆ)



ಆರೋಪಿ ಪ್ರಜ್ವಲ್ ರೇವಣ್ಣನ ಬಂಧನಕ್ಕೆ ಆಗ್ರಹಿಸಿ
ಆತ್ಮಸ್ಥೈರ್ಯ ತುಂಬಿ,
ಎತ್ತಿ ಹಿಡಿಯಲು...
ಬೃಹತ್ ಪ್ರತಿಭಟನಾ ಮೆರವಣಿಗೆ
ಹೋರಾಟದ ನಡಿಗೆ ಹಾಸನದ ಕಡೆಗೆ